ಪ್ರವಾಸೋದ್ಯಮ ನಿಗಮದಿಂದ ನಡೆಸಲಾಗುತ್ತಿರುವ ಕೇಂದ್ರಗಳ ಬಗ್ಗೆ

ಶ್ರೀ ಬಿ. ಎ. ಉಮರಬ್ಬನವರ (ವಿಟ್ಲ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರವಾಸೋದ್ಯಮ ನಿಗಮದಿಂದ ನಡೆಸಲಾಗುತ್ತಿರುವ ಬಸ್ ಸಂಚಾರ ಮತ್ತು ಹೊಟೇಲ್‌ಗಳ ವಿವರ ನೀಡುವುದು.

ನಿಗಮಂದಲ್ಲಿ ಇರುವ ವಾಹನಗಳ ಸಂಖ್ಯೆ. ೨೮ ಡೀಲಕ್ಸ್ ಬಸ್‌ಗಳು, ೨ ಸೆಮಿ ಡಿಲಕ್ಸ್ ಬಸ್‌ಗಳು ೨ ಸ್ಪಾಂಡರ್ಡ್ ೨೯೦೦ ಕಾರ್‌ಗಳು ಮತ್ತು ೫ ಸಣ್ಣ ವಾಹನಗಳು.

ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ ಏರ್ಪಡಿಸಿದ ಪ್ರವಾಸಗಳನ್ನು ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ದರ್ಶನ, ಮೈಸೂರು ದರ್ಶನ, ಬೇಲೂರು, ಹಳೇಬೀಡು ಮತ್ತು ಶ್ರವಣಬೆಳಗೊಳ ಮೈಸೂರು–ಊಟಿ, ಮಂತ್ರಾಲಯ, ಹಂಪಿ ಟಿ.ಬಿ. ಡ್ಯಾಂ, ತಿರುಪತಿ ದರ್ಶನ. ಶಿವನಸಮುದ್ರ. ಸೋಮನಾಥಪುರ ರಂಗನತಿಟ್ಟು ಮತ್ತು ಕೆ.ಆರ್.ಎಸ್. ಬಿಜಾಪುರ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಮತ್ತು ಬನ್ನೇರುಘಟ್ಟ, ರಾಮೋಹಳ್ಳಿ, ನಂದಿಬೆಟ್ಟ.

ಬೆಂಗಳೂರಿನಿಂದ ರಾತ್ರಿ ಪ್ರವಾಸಗಳು.—ಬೆಳಗಾಂ, ಹೊಸಪೇಟೆ, ಮಂಗಳೂರು, ಹುಬ್ಬಳ್ಳಿ ಮತ್ತು ಕ್ಯಾಲಿಕಟ್ ಈ ಸ್ಥಳಗಳಿಗೆ.

ನಿಗಮದ 'ಮಯೂರು' ಹೊಟೇಲ್‌ಗಳ ವಿವರ.–ಬಾದಾಮಿ, ಬೀದರ್, ಬೀಜಾಪುರ, ಬೇಲೂರು ದಾಂಡೇಲಿ, ಗಂಲ್ಬರ್ಗಾ, ಕೆ.ಆರ್. ಎಸ್, ಮಂಗಳೂರು, ಮಡಕೇರಿ, ಮೈಸೂರು, ನಂದಿಬೆಟ್ಟ, ಊಟಿ, ಶ್ರೀರಂಗಪಟ್ಟಣ, ಟಿ. ಬಿ. ಡ್ಯಾಂ, ತಿರುಮಲ ತಿರುಪತಿ ಮತ್ತು ಸೋಮನಾಥಪುರ.

'ಮಯೂರ' ರೆಸ್ಟೋರಂಟಗಳು.—ಕಬ್ಬನ್‌ಪಾರ್ಕ್. ಬನ್ನೇರುಘಟ್ಟ ಮತ್ತು ರಾಮೋಹಳ್ಳಿ, ಹೈವೇ ರೆಸ್ಟೋರಂಟ್, ಮದ್ದೂರು, ಶಾಂತಿಸಾಗರ ರೆಸ್ಟೋರಂಟ್, ಶಿವಮೊಗ್ಗ,

ವಿಹಾರ ನೌಕೆಗಳು.—ಬೆಂಗಳೂರಿನ ಸ್ಯಾಂಕಿ, ಅಲಸೂರು ಮತ್ತು ಯಡಿಯೂರು ಜಲಾಶಯಗಳು ಹಾಗೂ ಕೃಷ್ಣರಾಜಸಾಗರ.

ಆ) ಈ ನಿಗಮದ ಲಾಭ ನಷ್ಟಗಳೆಷ್ಟು ಹಾಗೂ ಇವುಗಳ ವಾರ್ಷಿಕ ವೆಚ್ಚವೆಷ್ಟು?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಮತ್ತು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

೧೯೭೧-೭೨ರಿಂದ ೧೯೮೭-೮೮ನೇ ಸಾಲಿನ ವ್ಯವಹಾರದ ಒಟ್ಟು ವಿವರ

	ಆದಾಯ	ವೆಚ್ಚ
	(ಲಕ್ಷ ರೂ. ಗಳಲ್ಲಿ)	
೧) ಸಾರಿಗೆ ವಿಭಾಗ	೯೬೬.೨೯	೭೪೮.೩೦
೨) ಹೋಟೆಲ್ ವಿಭಾಗ	೭೨೧.೫೨	೫೫೮.೯೫
೩) ಇತರೆ	೬.೭೪	೨೯೫.೩೦
ಒಟ್ಟು	೧೬೭೪.೫೫	೧೬೭೨.೩೦

ವ್ಯಾಪಾರಿ ಲಾಭ	೭೧.೯೮
ಸವಕಳಿ	೧೩೬.೦೭
ನಿವ್ವಳ ನಷ್ಟ	(೬೪.೦೯)

೧೯೮೭-೮೮ನೇ ಸಾಲಿನ ವ್ಯವಹಾರದ ವಿವರ (ತಾತ್ಕಾಲಿಕ)

	ಆದಾಯ	ವೆಚ್ಚ
	(ಲಕ್ಷ ರೂ. ಗಳಲ್ಲಿ)	
೧) ಸಾರಿಗೆ ವಿಭಾಗ	೧೬೯.೪೪	೧೪೩.೪೧
೨) ಹೋಟೆಲ್ ವಿಭಾಗ	೧೬೧.೯೩	೧೧೮.೯೫
೩) ಇತರೆ	...	೩೮.೫೦
ಒಟ್ಟು	೩೩೧.೮೭	೩೦೦.೮೬
ವ್ಯಾಪಾರಿ ಲಾಭ	೩೧.೦೧	
ಸವಕಳಿ	೧೨.೩೬	
ನಿವ್ವಳ ಲಾಭ	೧೮.೬೫	

ಸಂಬ್ರಮಣ್ಯ ನಗರ ಕೆರೆ ಅಂಗಳದ ಬಗ್ಗೆ

೪೦೨೫ ಶ್ರೀ ಎಂ. ಎಸ್. ಕೃಷ್ಣನ್, (ರಾಜಾಜಿನಗರ).—ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಲ್ಲೇಶ್ವರದಿಂದ ರಾಜಾಜಿನಗರ ೧೭ನೇ ಕ್ರಾಸ್‌ನಲ್ಲಿ ಹೋಗುವ ರೋಡ್ ಬ್ರಿಡ್ಜ್ ಪಕ್ಕದಲ್ಲಿ ಕೆರೆ ಅಂಗಳ ಇಕ್ಕೆಲೆಗಳಲ್ಲಿಯೂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇವೆರಡನ್ನು ಆಟದ ಮೈದಾನವಾಗಿ ಅಥವಾ ಉದ್ಯಾನವನವನ್ನಾಗಿ ಮಾಡಬೇಕೆಂದು ಶಾಸಕರೂ, ನಾಗರೀಕರೂ ಹಲವಾರು ವರ್ಷಗಳಿಂದ ಒತ್ತಾಯ ಮಾಡುತ್ತಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಮಹಾನಗರ ಪಾಲಿಕೆಯವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ವಿ. ದೇಶಪಾಂಡೆ, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಹೌದು.

ಇ) ಕೇತಮಾರನಹಳ್ಳಿ ಸ. ನಂ. ೨೭ರಲ್ಲಿ ೮ ಎಕರೆ ೫೦ ಗುಂಟೆ ಜಮೀನನ್ನು ಆಟದ ಮೈದಾನವನ್ನಾಗಿ ಮತ್ತು ಹೂ ತೋಟವನ್ನಾಗಿ ಅಭಿವರ್ಧಿಸಲು ತೊಡಗಿದಾಗ ಶ್ರೀ ಜಯಸೂರ್ಯ ಮತ್ತು ಇತರರು ನ್ಯಾಯಾಲಯದಲ್ಲಿ ದಾವೆ ಹೂಡಿ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ.

ನ್ಯಾಯಾಲಯದಲ್ಲಿ ಈ ಪ್ರಕರಣವೂ ಇನ್ನೂ ವಿಚಾರಣೆಯಲ್ಲಿದೆ. ತಡೆಯಾಜ್ಞೆಯನ್ನು ತೆರವು ಮಾಡಲು ನಗರ ಪಾಲಿಕೆಯು ಕ್ರಮವನ್ನು ಕೈಗೊಂಡಿರುತ್ತದೆ.